**ಹಾನಗಲ್‌ನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳರವರ ನ್ಯಾಯಾಲಯದಲ್ಲಿ, ಹಾನಗಲ್**

**ಉಪಸ್ಥಿತರುಃ** ಶ್ರೀಮತಿ ಫಕೀರವ್ವ ಕೆಳಗೇರಿ, *ಬಿ.ಎ.,ಎಲ್ ಎಲ್ ಬಿ.*
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಹಾನಗಲ್.

**ಅಸಲ ದಾವಾ ನಂ.71/2018**

**ದಿನಾಂಕಃ 9 ನೇ ನವೆಂಬರ್ 2020**

ವಾದಿಯರು : ಗುಲಾಮ ಜಿಲಾನಿ ಮೆಹಬೂಬಅಲಿ ಶೇಖ.

(ವಕೀಲರಾದ ಶ್ರೀ ಎಂ.ಎಂ.ಯು, ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ವಿರುದ್ಧ**

ಪ್ರತಿವಾದಿಯರು : ಶ್ರೀಮತಿ ಶೋಭಾ ಕೋಂ ಶಂಭುಲಿಂಗಪ್ಪ ಮಾಮಲೆಪಟ್ಟಣಶೆಟ್ಟರ.

(ವಕೀಲರಾದ ಶ್ರೀ ಎಸ್.ಜಿ.ವಿ. ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ಮಧ್ಯಂತರ ಅರ್ಜಿ ಸಂಖ್ಯೆ-1**

ಅರ್ಜಿದಾರ/ವಾದಿ :ಗುಲಾಮ ಜಿಲಾನಿ ಮೆಹಬೂಬಅಲಿ ಶೇಖ.

**ವಿರುದ್ಧ**

ಎದುರುದಾರರು : ಶ್ರೀಮತಿ ಶೋಭಾ ಕೋಂ ಶಂಭುಲಿಂಗಪ್ಪ ಮಾಮಲೆಪಟ್ಟಣಶೆಟ್ಟರ.

**ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಆದೇಶ**

ವಾದಿ/ಅರ್ಜಿದಾರ ತನ್ನ ಪ್ರಮಾಣಪತ್ರದಲ್ಲಿ ಹೇಳುವುದೇನೆಂದರೆ, ಪ್ರತಿವಾದಿಯಾಗಲಿ ಅವರ ಪರವಾಗಿ ಯಾರೇ ಆಗಲಿ ವಾದಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಯ ದಾವಾದ ಆಸ್ತಿಯ ವಹಿವಾಟಿಗೆ ಅಡತಡೆಯನ್ನುಂಟು ಮಾಡದಂತೆ ಪ್ರಸುತ್ತ ದಾವಾ ನಿಖಾಲಿವಾಗುವವರೆಗೆ ಪ್ರತಿವಾದಿಯರ ವಿರುದ್ಧ ಮಧ್ಯಂತರ ತಾಕೀತಿ ಹುಕುಂನ್ನು ಮಂಜೂರ ಮಾಡುವಂತೆ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರ/ವಾದಿಯು ತನ್ನ ಅರ್ಜಿಯ ಜೊತೆಗೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ ದಾವಾದ ಆಸ್ತಿ ಮತ್ತು ಮಹಾರಾಜಪೇಟ ಗ್ರಾಮದ ರಿಸ ನಂ.3/ಬಿ ಆಸ್ತಿಗಳು ಮೂಲತಃ ಶ್ರೀ ಪ್ರಭುದೇವ ರೈಸಮಿಲ್ ಹಾಗೂ ಪಾಲುದಾರರ ಆಸ್ತಿಗಳಿದ್ದು, ಸದರಿಯವರು ಹಾವೇರಿ ಹಣಕಾಸು ಸಂಸ್ಥೆ ಇವರಿಂದ ಸಾಲಪಡೆದು ಘಟಕವನ್ನು ಪ್ರಾರಂಭಿಸಿ, ನಂತರ ಸದರಿ ಪಾಲುದಾರರು ಸಮಯಕ್ಕೆ ಸಾಲ ತುಂಬದಿದ್ದ ಕಾರಣ ಸದರಿ ಸಂಸ್ಥೆಯವರು ಸದರಿ ಘಟಕವನ್ನು ಹರಾಜು ಮಾಡಿದಾಗ ವಾದಿಯ ತಂದೆಯಾದ ಮೆಹಬೂಬಲಿ ರಾಜೇಸಾಬ ಶೇಖ ಇವರು ಹೆಚ್ಚಿನ ಹಣಕ್ಕೆ ಹರಾಜಿನಲ್ಲಿ ಭಾಗವಹಿಸಿ ಸನ್ 1992 ರಲ್ಲಿ ರೂ.4,60,000-00 ಗಳಿಗೆ ಖರೀದಿಸಿದ್ದು, ಹಣಕಾಸಿನ ಸಂಸ್ಥೆಯವರು ವಾದಿಯ ತಂದೆಯ ಹೆಸರಿನಲ್ಲಿ ಖರೀದಿ ಪತ್ರವನ್ನು ನೋಂದುಮಾಡಿಕೊಟ್ಟಿದ್ದು, ನಂತರ ವಾದಿ ಹಾಗೂ ಆತನ ತಂದೆ ಸದರಿ ಘಟಕವನ್ನು ವಹಿವಾಟಿಸುತ್ತಾ ಬಂದು ಹಣಕಾಸಿನ ಸಂಸ್ಥೆ ಹಾವೇರಿ ಇವರಿಂದ ರೂ.14,50,000-00 ಗಳ ಸಾಲ ಪಡೆದು ಘಟಕನ್ನು ಪ್ರಾರಂಭಿಸಿದ್ದು ಇರುತ್ತದೆ. ಆದರೆ ಕಂದಾಯ ದಾಖಲೆಗಳಲ್ಲಿ ದಾವಾದ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯಲ್ಲಿ ಶ್ರೀ ಪ್ರಭುದೇವ ರೈಸಮಿಲ್ ಪಾಲುದಾರ ಸಂಸ್ಥೆ ಪರವಾಗಿ ಮ್ಯಾನೇಜಿಂಗ ಪಾರ್ಟನರ್ ಮಲಿಂಗಪ್ಪ ಚಂದ್ರಶೇಖರಪ್ಪ ಶೆಟ್ಟರ ಇವರ ಹೆಸರು ಮುಂದುವರೆದಿದ್ದು ಇರುತ್ತದೆ.

3. ಮುಂದುವರೆದು ವಾದಿಯು ಹೇಳುವುದೇನೆಂದರೆ, ಸದರಿ ಘಟಕದಲ್ಲಿ ಲಾಭವಿಲ್ಲದ ಕಾರಣ ಹಾವೇರಿ ಹಣಕಾಸು ಸಂಸ್ಥೆಯವರು ಸದರಿ ಘಟಕವನ್ನು ಹರಾಜು ಮಾಡಲು ನೋಟಿಸ ನೀಡಿದ್ದು, ಸದರಿ ಅವಧಿಯಲ್ಲಿ ವಾದಿಯ ತಂದೆ ಅಜಮಾಸ ರೂ.22,00,000-00 ಗಳನ್ನು ಸಾಲದ ಖಾತೆಗೆ ಜಮಾ ಮಾಡಿದ್ದಾಗ್ಯೂ ಬಡ್ಡಿಸಮೇತ ಸದರಿ ಸಾಲ ರೂ.4,32,86,336-00 ಗಳು ಬಾಕಿ ಇದ್ದು ಏಕಕಾಲಕ್ಕೆ ಸದರಿ ಸಾಲವನ್ನು ಮೌಕಳಿಕ ಮಾಡಲು ವಿನಂತಿಸಿ ಸನ್ 2001 ರಿಂದ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರಲ್ಲಿ ಪ್ರಕರಣ ನಡೆದು ಹಾಗೂ ಸನ್ 2014 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರಲ್ಲಿ ಪ್ರಕರಣಗಳು ನಡೆದು ಸದರಿ ಘಟಕವನ್ನು ಹರಾಜು ಮಾಡಲು ಮಧ್ಯಂತರ ಆದೇಶ ಸಹ ಆಗಿದ್ದು ಇರುತ್ತದೆ. ಮುಂದುವರೆದು ವಾದಿಯ ತಂದೆಯು ದಿನಾಂಕ 06-01-2006 ಹಾಗೂ ತಾಯಿಯು ದಿನಾಂಕ 08-04-2015 ರಂದು ಪೋತಿಯಾಗಿದ್ದು ಇರುತ್ತದೆ.

4. ಮುಂದುವರೆದು ವಾದಿಯು ಹೇಳುವುದೇನೆಂದರೆ, ತನ್ನ ಆಸ್ತಿಯಾದ ಮಹಾರಾಜಪೇಟ ಗ್ರಾಮದ ರಿಸ ನಂ.3/ಬ ಕ್ಷೇತ್ರ 2 ಎಕರೆ ಆಸ್ತಿಯನ್ನು ಪ್ರತಿವಾದಿಗೆ ದಿನಾಂಕ 03-06-2015 ರಂದು ರೂ.47,04,000-00 ಗಳಿಗೆ ಹರಾಜು ಮಾಡಿ ಪ್ರತಿವಾದಿಯ ಸ್ವಾಧೀನಕ್ಕೆ ನೀಡಿದ್ದು, ಆದರೆ ದಾವಾದಾಸ್ತಿಯಾದ ಹಾನಗಲ್ ತಾಲೂಕ ಮಹಾರಾಜಪೇಟ ಗ್ರಾಮದ ರಿಸ ನಂ.3/ಅ ಆಸ್ತಿಯು ವಾದಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿದ್ದು, ಸದರಿ ಆಸ್ತಿಗೆ ಪ್ರತಿವಾದಿಯು ಯಾವುದೇ ರೀತಿಯಿಂದ ಸಂಬಂಧ ಇರದೇ ಇದ್ದರೂ ಪ್ರತಿವಾದಿಯು ಸದರಿ ದಾವಾದಾಸ್ತಿಗೆ ದಿನನಿತ್ಯ

ವಾದಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಗೆ ಅಡೆತಡೆ ಮಾಡಲು ಪ್ರಾರಂಭಿದ್ದರಿಂದ ವಾದಿ ಸನ್ 2017 ರಲ್ಲಿ ಹಣಕಾಸಿನ ಸಂಸ್ಥೆ ಹಾವೇರಿ ಹಾಗೂ ಬೆಂಗಳೂರು ಇವರಲ್ಲಿ ಏಕಕಾಲಕ್ಕೆ (One Time Settlement) ಸಾಲವನ್ನು ಚುಕ್ತಾ ಮಾಡಲು ವಿನಂತಿಸಿದಾಗ, ಸದರಿ ಘಟದ ಮೇಲೆ ಇದ್ದ ಸಾಲವನ್ನು ಕೇವಲ ರೂ.4,50,000–00 ಗಳಿಗೆ ನಿಖಾಲಿ ಮಾಡಿದ್ದು, ದಾವಾದ ಆಸ್ತಿಯ ಮೇಲೆ ಹಣಕಾಸಿನ ಸಂಸ್ಥೆ ಹಾವೇರಿ/ಬೆಂಗಳೂರು ಇವರ ಋಣಭಾರ ಇರುವುದಿಲ್ಲ. ಸದರಿ ದಾವಾದಾಸ್ತಿಯಲ್ಲಿ ಪ್ರತಿವಾದಿಯಗೆ ಯಾವುದೇ ಹಕ್ಕು ವ ಹಿತಾಸಕ್ತಿ ಇಲ್ಲದೇ ಇದ್ದರೂ ವಾದಿಯ ಹಕ್ಕನ್ನು ನಷ್ಟಪಡಿಸಿ, ವಾದಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಗೆ ಅಡೆತಡೆ ಮಾಡಿದ್ದರಿಂದ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾಖಲಿಸಿ, ಈ ಮಧ್ಯಂತರ ಅರ್ಜಿಯ ಮುಖಾಂತರ ತಾತ್ಕಾಲಿಕ ನಿರ್ಭಂಧಕಾಜ್ಞಜೆಯನ್ನು ಕೋರಿ ಪ್ರತಿವಾದಿಯರಾಗಲೀ ಅಥವಾ ಅವರ ಅವರ ತರ್ಫೆ ಯಾರೇ ವಾದಿಯರ ದಾವಾ ಆಸ್ತಿಯ ಶಾಂತಿಯುತ ಕಬ್ಜಾ ವಹಿವುವಾಟಿಗೆ ಹರತಕ್ ವ ತೊಂದರೆ ಮಾಡದಂತೆ ಸದರಿ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ತಾಕೀದಿ ಹುಕ್ಮು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

5. ಎದುರುದಾರರು/ಪ್ರತಿವಾದಿಯು ಮೇಮೋ ಸಲ್ಲಿಸಿ, ತಾನು ಸಲ್ಲಿಸಿರುವ ಕೈಫಿಯತ್ತನ್ನು ಈ ಅರ್ಜಿಗೆ ತಕರಾರು ಅಂತಾ ಪರಿಗಣಿಸಲು ವಿನಂತಿಸಿರುತ್ತಾರೆ ಹಾಗೂ ವಾದಿಯು ತನ್ನ ಅಸಲರ್ಜಿಯಲ್ಲಿ ಬರೆಯಿಸಿದ ಎಲ್ಲ ಸಂಗತಿಗಳು ಸಂಪೂರ್ಣ ಸುಳ್ಳು ಇದ್ದು, ಸದರ ಸಂಗತಿಗಳನ್ನು ತಮ್ಮ ದಾವೆಗೆ ಅನುಕೂಲವಾಗಲೆಂದು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದು, ಈ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದು ಇರುತ್ತದೆ. **ಆದರೆ ವಾದಿಯು ತಹಶೀಲ್ದಾರ, ಹಾನಗಲ್ ಇವರ ಆದೇಶ RTS/CR/796 Dated 09–09–2011 ರ ಪ್ರಕಾರ ದಾವಾ ಜಮೀನಿನ ಫೊಡಿ ಕಬ್ಜಾ ವಹಿವಾಟಿಯಲ್ಲಿದ್ದು,** ಎಂಆರ್ ನಂ.08/2011–2012 ಇದು ಒಪ್ಪಿಗೆಯಾಗಿದ್ದು ಅಲ್ಲದೆ ಸಂಬಂಧಪಟ್ಟ ಇಲಾಖೆಯಿಂದ ಮಾನ್ಯತೆ ಪಡೆದಿದ್ದು ಇರುತ್ತದೆ. ಮುಂದುವರೆದು ವಾದಿಯು ದಾವೆಯನ್ನು ಸರಿಯಾಗಿ ಮೌಲ್ಯೀಕರಿಸಿರುವುದಿಲ್ಲ ಮತ್ತು ಸರಿಯಾದ ಕೋರ್ಟ ಶುಲ್ಕವನ್ನು ಸಹ ತುಂಬಿರುವುದಿಲ್ಲ. ಮುಂದುವರೆದು ವಾದಿಯು ಸದರಿ ದಾವೆಯನ್ನು ದಾಖಲು ಮಾಡಲು ಯಾವುದೇ ಕಾರಣ ಉಂಟಾಗಿರುವುದಿಲ್ಲ ಹಾಗೂ ವಾದಿಯ ಪರವಾಗಿ ಪ್ರೈಮಾ ಫೆಸಿಯಾ ಕೇಸ ಹಾಗೂ ಬ್ಯಾಲೆನ್ಸ್ ಆಫ್ ಕನ್ವಿನಿಯನ್ಸ್ ಕೂಡಾ ಇರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡಬೇಕೆಂದು ದಾವೆಯನ್ನು ವಜಾ ಮಾಡಬೇಕಾಗಿ ವಿನಂತಿಸಿರುತ್ತಾರೆ.

6. ವಾದವನ್ನು ಆಲಿಸಿರುತ್ತೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ನನ್ನ ಪರಿಗಣನೆಗೆ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರ/ವಾದಿಯು ತನ್ನ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಕೇಸು ಇದೆಯೆಂದು ತೋರಿಸಿ ಕೊಡುವರೇ?

2.ಅರ್ಜಿದಾರ/ವಾದಿಯು ತನ್ನ ಪರವಾಗಿ ಅನುಕೂಲತೆಯ ಸಂತುಲನೆ ಇದೆಯೆಂದು ತೋರಿಸಿ ಕೊಡುವರೇ?

3.ಅರ್ಜಿದಾರ/ವಾದಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ, ಕಷ್ಟ ಮತ್ತು ತೊಂದರೆ ಉಂಟಾಗುತ್ತದೆ ಎಂದು ತೋರಿಸಿ ಕೊಡುವರೆ?

4. ಯಾವ ಆದೇಶ?

7. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 3 ಃ ನಕಾರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿಃ

**ಕಾರಣಗಳು**

8. **ಅಂಶ ನಂ.1 ರಿಂದ 3**ಃ ಸದರಿ ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿರುವುದರಿಂದ ಮತ್ತು ಸಂಗತಿಗಳ ಪುನರಾವರ್ತನೆಯಾಗುವುದನ್ನು ತಡೆಯಲು ಅವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

ವಾದಿಯು ಮೇಲ್ನೋಟಕ್ಕೆ ತನ್ನ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಹಾನಗಲ್ ತಾಲೂಕ ಮಹಾರಾಜಪೇಟ ಗ್ರಾಮದ ವಿಪಿಸಿ ನಂ.12, 11 ಹಾಗೂ 11/1 ನೇದ್ದವುಗಳಿಗೆ ಸಂಬಂಧಿಸಿದ ಮೂರು ಕರಾಕರಣೆ ಯಾದಿಗಳನ್ನು ಮತ್ತು ಗ್ರಾಮ ಪಂಚಾಯತಿ ಕಾರ್ಯಾಲಯ, ಯಳವಟ್ಟಿ ಇವರು ನೀಡಿದ ಎರಡು ದೃಢೀಕರಣ ಪತ್ರಗಳನ್ನು, ಎಂಟು ಛಾಯಚಿತ್ರಗಳು ಹಾಗೂ ಸಿಡಿ, ಗ್ರಾಮ ಪಂಚಾಯತಿ ಕಾರ್ಯಾಲಯ, ಯಳವಟ್ಟಿ ಇವರು ನೀಡಿದ ಚಕ್ಕಬಂದಿಗೆ ಸಂಬಂಧಿಸಿದ ಪ್ರಮಾಣ ಪತ್ರ, ಯಳವಟ್ಟಿ ಗ್ರಾಮದ ರಿಸ ನಂ.58/2, 124/1 ಅ ಹಾಗೂ 126/2 ನೇದ್ದವುಗಳಿಗೆ ಸಂಬಂಧಿಸಿದ ಮೂರು ಪಹಣಿ ಪತ್ರಿಕೆಗಳನ್ನು, ಐದು ಛಾಯಾಚಿತ್ರಗಳು ಹಾಗೂ ಅದಕ್ಕೆ ಸಂಬಂಧಿಸಿದ ಸಿಡಿಯನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯು ತನ್ನ ಪ್ರತಿವಾದಿವನ್ನು ಸಾಬೀತುಪಡಿಸಲು ಹಾನಗಲ್ ತಾಲೂಕ ಯಳವಟ್ಟಿ ಗ್ರಾಮದ ವಿಪಿಸಿ ನಂ.11/1 ಹಾಗೂ 11/2 ನೇದ್ದವುಗಳಿಗೆ ಸಂಬಂಧಿಸಿದ ಎರಡು ಕರಾಕರಣೆ ಯಾದಿಗಳನ್ನು, ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರದ ಎರಡು ಪ್ರತಿಗಳನ್ನು, ಖರೀದಿ ಪತ್ರದ ದೃಢೀಕೃತ ಪ್ರತಿಯನ್ನು, ಗ್ರಾಮ ಪಂಚಾಯತಿ ಕಾರ್ಯಾಲಯ, ಯಳವಟ್ಟಿ ಇವರು ನೀಡಿದ ಪ್ರಮಾಣ ಪತ್ರ, ಕಚ್ಚಾ ಹಾತ ನಕ್ಷೆಯನ್ನು ಹಾಗೂ ಎರಡು ಸಾಮಾನ್ಯ ರಸೀದಿಯನ್ನು ಹಾಗೂ ನಾಲ್ಕು ಛಾಯಚಿತ್ರಗಳು ಮತ್ತು ಸಿಡಿಯನ್ನು ಹಾಜರುಪಡಿಸಿರುತ್ತಾರೆ.

9. ವಾದಿಯ ಪ್ರಕಾರ ದಾವಾದಾಸ್ತಿ ಹಾಗೂ ರಿಸ ನಂ.3/ಬಿ ಕ್ಷೇತ್ರ 2 ಎಕರೆ ಆಸ್ತಿಗಳು ಮೂಲತಃ ಶ್ರೀ ಪ್ರಭುದೇವ ರೈಸ್ ಮಿಲ್ ಹಾಗೂ ಪಾಲುದಾರರು ಇವರ ಮಾಲ್ಕಿ ಆಸ್ತಿ ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ ಮತ್ತು ಸದರಿ ಪಾಲುದಾರರು ಹಾವೇರಿ ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ಘಟಕವನ್ನು ಪ್ರಾರಂಭಿಸಿದ್ದು, ಸದರಿ ಸಾಲವನ್ನು ತುಂಬದೇ ಇದ್ದುದರಿಂದ ರಿಸ ನಂ.3/ಬಿ ಕ್ಷೇತ್ರ 2 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಹರಾಜನ್ನು ಕೈಗೊಂಡಾಗ ವಾದಿಯ ತಂದೆ ಖರೀದಿಸಿದ್ದು, ನಂತರ ವಾದಿ ಮತ್ತು ವಾದಿಯ ತಂದೆ ಹಾವೇರಿ ಹಣಕಾಸು ಸಂಸ್ಥೆಯಿಂದ ರೂ.14,50,000-00 ಸಾಲ ಪಡೆದು ಘಟಕ ಪ್ರಾರಂಭಿಸಿದ್ದು, ಸದರಿ ಸಾಲವನ್ನು ತೀರಿಸಲು ಆಗದೇ ಇದ್ದಾಗ ಸದರಿ ಸಂಸ್ಥೆಯನ್ನು ಹರಾಜು ಮಾಡಲು ನೋಟಿಸ ನೀಡಿದ್ದರಿಂದ ವಾದಿಯ ತಂದೆ ರೂ.22,00,000-00 ಗಳನ್ನು ಜಮಾ ಮಾಡಿದ್ದರೂ ಸಹಿತ ಸಾಲ ರೂ.4,32,86,336-00 ಬಾಕಿ ಇದ್ದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರ ನ್ಯಾಯಾಲಯವು ಸದರಿ ಘಟಕವನ್ನು ಹರಾಜು ಮಾಡಲು ಆದೇಶಿಸಿದ್ದು, ಸದರಿ ಹರಾಜಿನಲ್ಲಿ ಪ್ರತಿವಾದಿಯು ರಿಸ ನಂ.3/ಬ ಕ್ಷೇತ್ರ 2 ಎಕರೆ ಜಮೀನನ್ನು ಖರೀದಿಸಿದ್ದು, ಆದರೆ ದಾವಾದಾಸ್ತಿಯಲ್ಲಿ ಯಾವುದೇ ಹಿತಾಸಕ್ತಿ ಇಲ್ಲದಿದ್ದರೂ ಸಹಿತ ವಾದಿಯ ಕಬ್ಜಾ ವಹಿವಾಟಿಗೆ ದಾವಾದಾಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿ ಅಡೆತಡೆ ಮಾಡುತ್ತಿರುತ್ತಾರೆ. ವಾದಿ ಮುಂದುವರೆದು ಹೇಳುವುದೇನೆಂದರೆ, ಏಕಕಾಲಕ್ಕೆ ಸಾಲವನ್ನು ಚುಕ್ತಾ ಮಾಡಲು ವಿನಂತಿಸಿದಾಗ ಹಣಕಾಸು ಸಂಸ್ಥೆ ಹಾವೇರಿ ರೂ.4,50,000-00 ಗಳನ್ನು ಪಡೆದು ನಿಖಾಲಿ ಮಾಡಿದ್ದು ಇರುತ್ತದೆ. ಆದ್ದರಿಂದ ಸದರಿ ಆಸ್ತಿಯ ಮೇಲೆ ಯಾವುದೇ ಋಣಭಾರ ಇರುವುದಿಲ್ಲ. ಸದರಿ ಆಸ್ತಿಯ ಕಂದಾಯ ದಾಖಲೆಯಲ್ಲಿ ಶ್ರೀ ಪ್ರಭುದೇವ ರೈಸ್ ಮಿಲ್ ಪಾಲುದಾರ ಸಂಸ್ಥೆ ಪರವಾಗಿ ಮ್ಯಾನೇಜಿಂಗ್ ಪಾರ್ಟನರ ಮಹಾಲಿಂಗಪ್ಪ ಚಂದ್ರಶೇಖರಪ್ಪ ಶೆಟ್ಟರ ಇವರ ಹೆಸರು ದಾಖಲಾಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಯು ತನ್ನ ತಕರಾರಿನಲ್ಲಿ ವಾದಿಯು ದಾವಾದಾಸ್ತಿಯ ಸ್ವಾಧೀನದ ಪರಿಹಾರ ಕೇಳದೇ ಕೇವಲ ಘೋಷಣಾತ್ಮಕ ಮತ್ತು ನಿರ್ಭಂಧಕಾಜ್ಞೆ ಕೋರಿ ದಾವೆ ಮಾಡಲು ಬರುವುದಿಲ್ಲವಾದ್ದರಿಂದ, ದಾವೆಯು ಊರ್ಜಿತವಾಗುವುದಿಲ್ಲ ಅಂತಾ ವಾದಿಸುತ್ತಾರೆ.

10. ವಾದಿಯು ದಾವಾದಾಸ್ತಿಯಾದ ರಿಸ ನಂ.3/ಬ ಕ್ಷೇತ್ರ 1 ಎಕರೆ 33 ಗುಂಟೆಗೆ ಸಂಬಂಧಿಸಿದಂತೆ ತನ್ನ ಮಾಲ್ಕಿ ಹಕ್ಕನ್ನು ಘೋಷಿಲು ಮತ್ತು ನಿರ್ಭಂಧಕಾಜ್ಞೆ ಕೋರಿ ಈ ದಾವೆ ಮಾಡಿರುತ್ತಾನೆ. ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿದ ಖರೀದಿ ಪತ್ರದ (public auction) ದೃಢೀಕೃತಪ್ರತಿಯನ್ನು ಪರಿಶೀಲಿಸಿದಾಗ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕೈಗೊಂಡ ಸಾರ್ವಜನಿಕ ಹರಾಜಿನಲ್ಲಿ ಪ್ರತಿವಾದಿಯು ದಿನಾಂಕ 03-06-2015 ರಂದು ಮಹಾರಾಜಪೇಟ ಗ್ರಾಮದ ರಿಸ ನಂ.3/ಬ ಕ್ಷೇತ್ರ 2 ಎಕರೆ ಆಸ್ತಿಯನ್ನು ಖರೀದಿಸಿ, ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಕಂಡುಬರುತ್ತದೆ. ಆದರೆ ವಾದಿಯು ದಾವಾದಾಸ್ತಿಯು ತನ್ನ ಮಾಲ್ಕಿ ಆಸ್ತಿ ಮತ್ತು ದಾವೆ ದಾಖಲು ಮಾಡುವ ಸಮಯದಲ್ಲಿ ಸದರಿ ಆಸ್ತಿಯು ಮೇಲ್ನೋಟಕ್ಕೆ ತನ್ನ ಸ್ವಾಧೀನದಲ್ಲಿದೆ ಎಂದು ತೋರಿಸಲು

ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, ಕಾಲಂ ನಂ.9 ರಲ್ಲಿ ಕ್ಷೇತ್ರ 1 ಎ–33 ಗುಂಟೆಗೆ ಸಂಬಂಧಿಸಿದಂತೆ ಶ್ರೀ ಪ್ರಭುದೇವ ರೈಸ್ ಮಿಲ್ ಪಾಲುದಾರ ಸಂಸ್ಥೆ ಪರವಾಗಿ ಮ್ಯಾನೇಜಿಂಗ ಪಾರ್ಟನರ ಮಹಾಲಿಂಗಪ್ಪ ತಂದೆ ಚಂದ್ರಶೇಖರಪ್ಪ ಶೆಟ್ಟರ ಇವರ ಹೆಸರು ದಾಖಲಿರುವುದು ಕಂಡುಬರುತ್ತದೆ.

11. ವಾದಿಯು ಹಾಜರುಪಡಿಸಿದ ಖರೀದಿ ಪತ್ರ (auction sale)ನ್ನು ಪರಿಶೀಲಿಸಿದಾಗ, ಮೆಃಃ ಪ್ರಭುದೇವ ರೈಸ ಮಿಲ್ ಮತ್ತು ಪಾಲುದಾರರು ಸಾಲದ ಭದ್ರತೆಗಾಗಿ ಮಹಾರಾಜಪೇಟ ಗ್ರಾಮದ ರಿಸ ನಂ.3/ಬ (ಹಳೇ ರಿಸ ನಂ.3/ಅ) ಮತ್ತು ಪಂಚಾಯತ ಆಸ್ತಿ ನಂ.151700200 500500143 (ಹಳೆ ನಂ.103 ಅನಡ 98) ಆಸ್ತಿಗಳನ್ನು ಅಡಮಾನ ಮಾಡಿದ್ದು, ನಂತರ ಸಾಲ ಮರುಪಾವತಿ ಮಾಡದೇ ಇದ್ದಾಗ ಸಾರ್ವಜನಿಕ ಹರಾಜು ಪ್ರಕ್ರಿಯೆ ಕೈಗೊಂಡಿದ್ದು, ಸದರಿ ಸಾರ್ವಜನಿಕ ಹರಾಜಿನಲ್ಲಿ ಯಾವುದೇ ಬಿಡ್ಡರ ಬರದೇ ಇದ್ದಾಗ ಸದರಿ ಹಣಕಾಸು ಸಂಸ್ಥೆಯೇ ಸದರಿ ಆಸ್ತಿಗಳನ್ನು ಖರೀದಿಸಿದ್ದು ಕಂಡುಬರುತ್ತದೆ. ಸದರಿ ಆಸ್ತಿಗಳನ್ನು ಖರೀದಿಸಿದ ನಂತರ ರಿಸ ನಂ.3/ಬ ಮತ್ತು 3/ಅ ಆಸ್ತಿಗಳನ್ನು ಕಂದಾಯ ಅಧಿಕಾರಿಗಳು ಅಳತೆ ಕಾರ್ಯ ಕೈಗೊಂಡ ಸಂದರ್ಭದಲ್ಲಿ ರಿಸ ನಂ.3/ಅ ಕ್ಷೇತ್ರ 2 ಮತ್ತು ಕೃಷಿ ಜಮೀನಾದ ರಿಸ ನಂ.3/ಬ ಕ್ಷೇತ್ರ 1 ಎಕರೆ 33 ಗುಂಟೆ ಅಂತಾ ನಮೂದಿಸಿದ್ದ ವಿಷಯ ಗಮನಕ್ಕೆ ಬಂದ ನಂತರ ವಿಶೇಷ ತಹಶೀಲ್ದಾರರರು ಸರ್ವೆ ತಿದ್ದುಪಡಿ ಪತ್ರವನ್ನು ದಿನಾಂಕ 07–06–2012 ರಂದು ಮಾಡಿಕೊಂಡರುವುದು ಕಂಡುಬರುತ್ತದೆ.

12. ವಾದಿಯ ವಾದ ಪತ್ರ ಮತ್ತು ದಾಖಲೆಗಳನ್ನು ಕಂಡುಬರುವುದೇನೆಂದರೆ , ಪ್ರಭುದೇವ ರೈಸ ಮಿಲ್ ಮತ್ತು ಪಾಲುದರರು, ಹಾವೇರಿ ಹಣಕಾಸು ಸಂಸ್ಥೆ ಇವರಿಗೆ ಸಾಲದ ಭದ್ರತೆಗಾಗಿ ಕೇವಲ 2 ಎಕರೆ ಆಸ್ತಿ ಮತ್ತು ಪಂಚಾಯತ ಆಸ್ತಿ ನಂ103 ಮತ್ತು 98 ನೇದ್ದಕ್ಕೆ ಸಂಬಂಧಿಸಿದವುಗಳನ್ನು ಅಡಮಾನ ಮಾಡಿದ್ದು, ಶೇತ್ಕರಿ ಜಮೀನಾದ ರಿಸ ನಂ.3/ಅ ಜಮೀನನ್ನು ಅಡಮಾನ ಮಾಡದೇ ಇರುವುದು ಕಂಡುಬರುತ್ತದೆ. ಸದರಿ ಹಾವೇರಿ ಹಣಕಾಸು ಸಂಸ್ಥೆ ಇವರಿಂದ ಕೈಗೊಂಡ ಸಾರ್ವಜನಿಕ ಹರಾಜಿನಲ್ಲಿ ವಾದಿಯ ತಂದೆ ಮತ್ತು ಆತನ ಸಹೋದರ ಖರೀದಿಸಿದ್ದು ಕಂಡುಬರುತ್ತದೆ. ಖರೀದಿ ಪತ್ರದಲ್ಲಿ ಕ್ಷೇತ್ರ 2 ಎಕರೆ ಆಸ್ತಿಯ ಪೂರ್ವ ದಿಕ್ಕಿಗೆ ಶ್ರೀ ಪ್ರಭುದೇವ ರೈಸ ಮಿಲ್ ಮತ್ತು ಪಾಲುದಾರರು ಅಂತಾ ನಮೂದಿ ಇರುತ್ತದೆ. ಅದರಂತೆ ದಾವಾದಾಸ್ತಿಯ ಪಹಣಿ ಪತ್ರಿಕೆಯಲ್ಲೂ ಸಹಿತ ಶ್ರೀ ಪ್ರಭುದೇವ ರೈಸ್ ಮಿಲ್ ಪಾಲುದಾರ ಸಂಸ್ಥೆ ಪರವಾಗಿ ಮ್ಯಾನೇಜಿಂಗ ಪಾರ್ಟನರ ಮಹಾಲಿಂಗಪ್ಪ ತಂದೆ ಚಂದ್ರಶೇಖರಪ್ಪ ಶೆಟ್ಟರ ಇವರ ಹೆಸರು ದಾಖಲಾಗಿದ್ದು ಇರುತ್ತದೆ. ವಾದಿಯು ಈ ಪ್ರಕರಣದಲ್ಲಿ ಪ್ರಭುದೇವ ರೈಸ ಮಿಲ್ ಹಾಗೂ ಪಾಲುದಾರ ಘಟಕದ ಯಾವುದೇ ಯಾವದೇ ಒಬ್ಬ ಸಂಬಂಧಿಸಿದ ಸದಸ್ಯರನ್ನಾಗಲೀ ಅಥವಾ ಮಹಾಲಿಂಗಪ್ಪ ಚಂದ್ರಶೇಖರಪ್ಪ ಶೆಟ್ಟರ ಇವರನ್ನಾಗಲೀ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ದಾವಾ ಆಸ್ತಿಯು ಮೇಲ್ನೋಟಕ್ಕೆ

ವಾದಿಯ ಸ್ವಾಧೀನದಲ್ಲಿ ಇಲ್ಲದೇ ಇರುವುದು ಕಂಡುಬರುತ್ತದೆ. ವಾದಿಯು ಈ ದಾವೆಯನ್ನು ದಾವಾದಾಸ್ತಿಯ ಸ್ವಾಧೀನತೆಯ ಪರಿಹಾರ ಕೋರದೆ ಕೇವಲ ಘೋಷಣಾತ್ಮಕ ಮತ್ತು ನಿರ್ಭಂದಕಾಜ್ಞೆ ಪರಿಹಾರ ಕೋರಿ ದಾವೆ ಮಾಡಿದ್ದು ಇರುತ್ತದೆ. ವಾದಿಯು ದಾವಾದಾಸ್ತಿಯ ಮಾಲೀಕತ್ವ ಮತ್ತು ಅದರ ಸ್ವಾಧೀನತೆಯನ್ನು ಸಾಬೀತುಪಡಿಸಲು ಪ್ರಕರಣದ ಸಂಪೂರ್ಣ ವಿಚಾರಣೆ ಅಗತ್ಯವಿರುತ್ತದೆ. ಈ ಹಂತದಲ್ಲಿ ಪ್ರಕರಣದ ಸಂಪೂರ್ಣ ವಿಚಾರಣೆ ಮಾಡಲು ಆಗುವುದಿಲ್ಲ.

13. ಯಾವುದೇ ಪ್ರಕರಣದಲ್ಲಿ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕಾದರೆ ದಾವಾ ಆಸ್ತಿಯು ಮೇಲ್ನೋಟಕ್ಕೆ ವಾದಿಯರ ಸ್ವಾಧೀನದಲ್ಲಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ವಾದಿಯು ದಾವಾದಾಸ್ತಿ ತನ್ನ ಸ್ವಾಧೀನದಲ್ಲಿದೆ ಅಂತಾ ತೋರಿಸಲು ಮೇಲ್ನೋಟಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವಾದಿಯು ಮೇಲ್ನೋಟಕ್ಕೆ ತಾನು ದಾವಾದಾಸ್ತಿಯ ಸ್ವಾಧೀನದಲ್ಲಿದ್ದೇನೆ ಎಂಬುದನ್ನು ಸಾಬೀತುಪಡಿಸಿರುವುದಿಲ್ಲ. ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ಹಾನಿ ವ ನಷ್ಟ ಉಂಟಾಗುತ್ತದೆ. ಒಂದು ವೇಳೆ ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡದೇ ಇದ್ದರೆ ವಾದಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ. ಈ ಹಂತದಲ್ಲಿ ಮಧ್ಯಂತರ ಅರ್ಜಿ ನಂ.1 ನ್ನು ಮಂಜೂರು ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಆದ್ದರಿಂದ ಅಂಶ ನಂ.1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

14. **ಅಂತ ನಂ.4ಃ** ಅಂಶ ನಂ.1 ರಿಂದ 3 ಕ್ಕೆ ನೀಡಿದ ಕಾರಣ ಹಾಗೂ ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಅರ್ಜಿದಾರ/ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ಸಹ ಕಲಂ 151 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ತಿರಸ್ಕರಿಸಲಾಗಿದೆ.

ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಗಾರನಿಗೆ ನೇರವಾಗಿ ಕಂಪ್ಯೂಟರ ಮೇಲೆ ಉಕ್ತಲೇಖನವನ್ನು ಕೊಟ್ಟು ಅವರಿಂ ಬೆರಳಚ್ಚುಪಡಿಸಿ ಅದನ್ನು ಓದಿ ತಿದ್ದಿ ನಂತರ ನನ್ನ ಸಹಿಯನ್ನು ಹಾಕಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕಃ 09-11-2020 ರಂದು ಉಚ್ಚರಿಸಲಾಯಿತು).

**(ಶ್ರೀಮತಿ ಫಕೀರವ್ವ ಕೆಳಗೇರಿ)**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್.